**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>**

**ಸಿಸಿ ನಂ. 22105/2018 ಚಾಸಾಃ 7 ಪ್ರಾಸಾಃ 3**

| | | |
|---|---|---|
| ಸಾಕ್ಷಿದಾರರ ಹೆಸರು | : | ಸುರೇಶ್ |
| ತಂದೆಯ ಹೆಸರು | : | ಬಿ.ಕೆ.ಸ್ವಾಮಿ |
| ವಯಸ್ಸು | : | 53 ವರ್ಷ |
| ವೃತ್ತಿ | : | ಪಿ.ಎಸ್.ಐ. |
| ವಾಸ | : | ಬಾಣಸವಾಡಿ, ಬೆಂಗಳೂರು |

**<u>ಸಾಕ್ಷಿಯನ್ನು ದಿಃ24.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸ.ಸ.ಅ ರವರಿಂದಃ-</u>**

ನಾನು 2017 ರಿಂದ 2022 ರವರೆಗೆ ಇಂದಿರಾನಗರ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ16.11.2017 ರಂದು ಈ ಪ್ರಕರಣದ ಆರೋಪಿಯನ್ನು ಕರೆದುಕೊಂಡು ಬಂದು ಹಾಜರುಪಡಿಸುವಂತೆ ನನಗೆ ಮತ್ತು ಚಾಸಾ-8 ರವರಿಗೆ ಚಾಸಾ-9 ರವರು ನಿರ್ದೇಶನ ನೀಡಿರುತ್ತಾರೆ. ಹುಕ್ಕೇರಿ ಗ್ರಾಮ, ಉಡುಪಿ ಜಿಲ್ಲೆಯಿಂದ ಆರೋಪಿಯನ್ನು ಪತ್ತೆ ಮಾಡಿ ಕರೆದುಕೊಂಡು ಬಂದು ಚಾಸಾ-9 ರವರ ಮುಂದೆ ಹಾಜರುಪಡಿಸಿರುತ್ತೇವೆ. ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ. ನಾನು ಆ ದಿನ ಕರೆದುಕೊಂಡು ಬಂದು ಚಾಸಾ-9 ರವರ ಮುಂದೆ ಹಾಜರುಪಡಿಸಿದ ಆರೋಪಿ ಈಗ ನ್ಯಾಯಾಲಯದ ಮುಂದೆ ಇದ್ದು ಅವರನ್ನು ನೋಡಿ ಗುರ್ತಿಸುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಆರೋಪಿಯನ್ನು ಕರೆದುಕೊಂಡು ಬಂದು ಹಾಜರುಪಡಿಸುವಂತೆ ಚಾಸಾ-9 ರವರು ಲಿಖಿತ ಆದೇಶ ನೀಡಿಲ್ಲ. ಆ ರೀತಿ ಚಾಸಾ-9 ರವರು ಆದೇಶ ನೀಡುವುದಕ್ಕಿಂತ ಹಿಂದೆ ಇಂದಿರಾನಗರ ಪೊಲೀಸ್ ಠಾಣೆಯ ಗಸ್ತಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ದಿಃ16.11.2017 ರಂದು ಬೆಳಿಗ್ಗೆ ಆರೋಪಿಯನ್ನು

ಕರೆದುಕೊಂಡು ಬಂದು ಹಾಜರುಪಡಿಸುವಂತೆ ಚಾಸಾ-9 ರವರು ಆದೇಶ ನೀಡಿರುತ್ತಾರೆ. ದಿಃ16.11.2017 ರಂದು ಸಂಜೆ ಆರೋಪಿಯನ್ನು ಹಿಡಿದಿರುತ್ತೇವೆ. ಮರುದಿವಸ ಮದ್ಯಾಹ್ನದ ನಂತರ ಆರೋಪಿಯನ್ನು ಚಾಸಾ-9 ರವರ ಮುಂದೆ ಹಾಜರುಪಡಿಸಿರುತ್ತೇವೆ. ಯಾವ ದಿನಾಂಕದಂದು ಆರೋಪಿಯನ್ನು ಹಾಜರುಪಡಿಸಿದ್ದೇನೆ ಎಂದರೆ ನೆನಪಿಲ್ಲ. ಬೆಂಗಳೂರಿನಿಂದ ಉಡುಪಿಗೆ ಬಸ್ಸಿನಿಂದ ಹೋಗಿರುತ್ತೇನೆ. ಬೆಂಗಳೂರಿನಿಂದ ಬೆಳಿಗ್ಗೆ ಬಸ್ ಹತ್ತಿರಬಹುದು. ಉಡುಪಿಗೆ ಸಂಜೆ 5.00 ಗಂಟೆಗೆ ತಲುಪಿದ್ದೇವೆ. ಆರೋಪಿಯನ್ನು ಅರೆಸ್ಟ್ ಮಾಡಿದ ಬಗ್ಗೆ ಅಲ್ಲಿನ ಕಾರ್ಯವ್ಯಾಪ್ತಿ ಪೊಲೀಸ್ ಠಾಣೆಗೆ ಇನ್‌ಟಿಮೇಷನ್ ಕೊಟ್ಟಿಲ್ಲ. ನಾನು ಆರೋಪಿಯನ್ನು ಅರೆಸ್ಟ್ ಮಾಡಿಲ್ಲ ಮತ್ತು ಆತನನ್ನು ಚಾಸಾ-9 ರವರ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸುಳ್ಳು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಿಂದ ಹೊರಟ ಸಮಯದ ಬಗ್ಗೆ ನಮ್ಮ ಠಾಣಾ ಡೈರಿಯಲ್ಲಿ ನಮಾದು ಮಾಡಿದ್ದೇವೆ. ಠಾಣಾ ಡೈರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**